# ಮತ್ತೆ ಮರ ಚಿಗುರುತ್ತಿದೆ

ಸಂಕ್ರಮಣ ಕಳೆದು ನಿಧಾನವಾಗಿ ಮಾಗಿ ಕಾಲ ಹಿಂದಕ್ಕೆ ಸರಿಯುತ್ತಿದೆ. ಬೇಸಿಗೆಯ ಆಗಮನದ ಸೂಚನೆ ಮೈಮನಗಳಿಗೆ ಭಾಸವಾಗುತ್ತದೆ. ಸುಡುಬಿಸಿಲಿನ ತಾಪ ಚರ್ಮದ ಬಣ್ಣವನ್ನು ಬದಲಿಸುವ ಹುನ್ನಾರದಲ್ಲಿದೆ. ನಮ್ಮ ಅರಣ್ಯಗಳ, ಗ್ರಾಮೀಣ ಪ್ರದೇಶಗಳ ಹೊಲಗದ್ದೆಗಳ ಮರಗಿಡಗಳು ತಮ್ಮ ಮುಪ್ಪಾಗಿ ಸೊಬಗು ಕಳೆದುಕೊಂಡಿರುವ ಎಲೆಗಳನ್ನು ಒಂದೊಂದಾಗಿ ಕಳಚಿ ಕೆಳಗೆ ಬೀಳಿಸುತ್ತಿವೆ. ಕಾಡು, ಹೊಲಗದ್ದೆ, ಬಯಲು– ಮುಪ್ಪಿನ ನಿಡುಸುಸ್ಸಿನ ಬಿಸಿ ಉಸಿರನ್ನು ಬಿಡುವಂತೆ ತೋರುತ್ತಿದೆ. ಇತ್ತ ಧೂಳು ಹಿಡಿದ ರಸ್ತೆ ಇಕ್ಕೆಲಗಳಲ್ಲಿ ಕಾದು ಬೆಂದ ಹೆಂಚಿನ ಮನೆಗಳಲ್ಲಿರುವ ವಯಸ್ಸಾದ ಮುದುಕ–ಮುದುಕಿಯರು ತಮ್ಮ ಒಣಗಿದ ಸುಕ್ಕುಗಟ್ಟಿದ ಚರ್ಮದ ಮೇಲೆ ಕೈಯಾಡಿಸುತ್ತಾ ಜಗುಲಿಗಳಲ್ಲಿ ಕುಳಿತು ಸದಾ ಏನನ್ನೋ ನಿರೀಕ್ಷೆ ಮಾಡುತ್ತಿರುತ್ತಾರೆ. ರಾತ್ರಿಯಾದೊಡನೆ ನಿದ್ದೆ ಬಾರದೆ ಆಗಸದ ನಕ್ಷತ್ರಗಳಲ್ಲಿ ತಮ್ಮ ನೆಲೆ ಯಾವುದಿರಬಹುದೆಂದು ಮಬ್ಬುಗಣ್ಣಿನಲ್ಲಿ ತಡಕಾಡುತ್ತಾರೆ. ಕವಿ ಪುತಿನ ಹೇಳುವಂತೆ ಧುತ್ತನೆ ಮೂಡಿ ಪ್ರೀತಿಯಿಂದ ಕರೆವ ಬೆಳಕಿಗೆ ಹಾತೊರೆಯುತ್ತಾರೆ. ಅಷ್ಟರಲ್ಲಿ ಅವರಿಗೆ ಮನೆಯ ಒಳಮನೆಯ ಬಾಣಂತಿ ಕೋಣೆಯಿಂದ ಎಳೆಯ ಮಗುವಿನ ಅಳುವ ಸದ್ದು ಕೇಳಿಬರುತ್ತದೆ. ಅವರ ಮುಖದ ಮೇಲೆ ಮಂದಹಾಸದ ಗೆರೆ ಮಿಂಚಿ ಮಾಯವಾಗುತ್ತದೆ.

ನಮ್ಮ ಸೀಮೆಯ ಸಸ್ಯ ಜಗತ್ತಿನಲ್ಲಿ ಸೃಷ್ಟಿಯ ಬಯಕೆ ಇಮ್ಮಡಿಯಾಗುತ್ತದೆ. ತಮ್ಮ ಮೈತುಂಬಿ ನಿಂತಿರುವ ಹಳದಿ ಮಿಶ್ರಿತ ಒಣ ಎಲೆಗಳನ್ನು ಬೀಳಿಸಿಕೊಳ್ಳಲು ವಾಯುದೇವನ ನೆರವನ್ನು ಬಯಸುತ್ತವೆ. ಆ ಎಲೆಗಳಿಗೆ ತಮ್ಮ ಜೀವನಾಳಗಳಿಂದ ರಸ ಹರಿಸುವ ಕ್ರಿಯೆಯನ್ನು ನಿಲ್ಲಿಸುತ್ತವೆ. ತಮ್ಮ ಬುಡದ ನೆಲ ನೀರು ಕಂಡು ಹಲವಾರು ತಿಂಗಳುಗಳೇ ಕಳೆದಿರುವುದು, ತಮ್ಮ ಬೇರಿನ ನೂರಾರು ನರನಾಡಿಗಳು ಒಣ ಮಣ್ಣಲ್ಲಿ ಉಸಿರುಗಟ್ಟಿ ತಿಣುಕಾಡುತ್ತಿರುವುದು ಅವಕ್ಕೆ ತಿಳಿಯದ ವಿಷಯವಲ್ಲ. ಒಣ ಅಂತರಾಳ, ಒಣ ಹೊರ ಮೈ, ಒಣ ಕಾಂಡ ರೆಂಬೆಗಳು... ಒಟ್ಟಾರೆಯಾಗಿ ಅವುಗಳ ಬದುಕು ಬಣಗುಟ್ಟುತ್ತಿದೆ. ಅಂಥ ಬದುಕಿನ ನೀರಸ ಸುಡು ಸಂದರ್ಭದಲ್ಲಿ ಚೈತ್ರದ ನೆನಪಾಗುತ್ತದೆ; ಅದಕ್ಕಾಗಿ ಅವು ವಸಂತನ ಕೂಗಿ ಕರೆದು ಹಂಬಲಿಸುತ್ತವೆ. ಅದಕ್ಕಾಗಿಯೇ ಅವು ತಮ್ಮ ತಲೆಮಾರುಗಳ ಪರಂಪರೆಯ ಮೂಲಕ ಸಂಗ್ರಹಿಸಿಟ್ಟುಕೊಂಡಿರುವ ವಂಶವಾಹಿ ಚೈತನ್ಯ ಶಕ್ತಿಯನ್ನು ಅವಗಾಹನೆ ಮಾಡಿಕೊಂಡು, ತಾವು ಉದುರಿಸಲು ಇಚ್ಛಿಸಿರುವ ಮುದಿ ಎಲೆಗಳ ಬುಡದ ಕಂಕುಳುಗಳಿಂದ ಹೊಸ ಚಿಗುರು ಮೊಗ್ಗುಗಳನ್ನು ಹೊರಚಿಮ್ಮಿಸಲು ಪ್ರಯತ್ನಿಸುತ್ತವೆ.

ಹೊರಗಿನ ಸುಡು ಬಿಸಿಲು, ಚರ್ಮಸೀಳುವ ಬಿಸಿ ಒಣಗಾಳಿಗೆ ಹೆದರದೆ ಸುಕುಮಾರ ಕೋಮಲ ಚಿಗುರುಗಳು ಅದೆಂಥದೋ ಪವಾಡವೆಂಬಂತೆ (ಪವಾಡವೆಂಬುದು ಹೊರಗಣ್ಣಿನಿಂದ ನೋಡುವವರಿಗೆ ಆಗುವ ಅನಿಸಿಕೆ ಮಾತ್ರ; ಅದೊಂದು ನಿಸರ್ಗ ಸಹಜ ಕ್ರಿಯೆ) ಹೊರ ಜಗತ್ತನ್ನು ಇಣುಕಿ ನೋಡುತ್ತವೆ! ಆ ಚಿಗುರು ಶಕ್ತಿಯನ್ನು ನೋಡಿಯೇ ಅನುಭವಿಸಬೇಕು. ಕ್ಷಣ ಕ್ಷಣಕ್ಕೆ ತಮ್ಮ ಒಳಗಿರುವ ಅದಮ್ಯ ಚೈತನ್ಯದಿಂದ ಬೆಳೆದು ಪ್ರಕಾಶಿಸುವ ಅವುಗಳ ಸೊಬಗು ಪರಿಸರವನ್ನು ಮೈ ತುಂಬುತ್ತದೆ. ಸುಡು ಬಿಸಿಲಿಗೆ, ಒಣಗಾಳಿಗೆ ತರಗುಟ್ಟಿ ಉದುರುತ್ತಿರುವ ತಮ್ಮ ಹಿರೀಕ ಎಲೆಗಳ ಹಾಗೆ ಹೆದರದೆ– ಬದುಕನ್ನು ಎದುರಿಸುವ ಅವುಗಳ ಪರಿ ನಿರಾಶೆಯ ಕಾರ್ಮೋಡವನ್ನು ಹೊಡೆದೋಡಿಸುವಂಥದು. ಮುಂದೆ ಬರಲಿರುವ ವಸಂತ–ಚೈತ್ರಗಳ ನಿರೀಕ್ಷೆಯ ಭರವಸೆಯಲ್ಲಿ ಬದುಕನ್ನು ಕಟ್ಟಿಕೊಂಡು ನಿರ್ವಹಿಸುವ ಪರಿ ಅದು. ಎಂಥ ವೈಚಿತ್ರ್ಯ ನೋಡಿ! ಈಗ ಮುದಿಯಾಗಿ ಉದುರುತ್ತಿರುವ ಮುದಿ ಎಲೆಯು ಕೂಡ ಒಂದು ವರ್ಷದ ಹಿಂದೆ ಇದೇ ರೀತಿ ಜೀವ ಚೈತನ್ಯ ಚಿಮ್ಮಿಸುತ್ತಿರುವ ಚಿಗುರೇ ಆಗಿತ್ತು. ಅದು ಆಗ ತನ್ನ ಸಂಕುಲದ ಪ್ರತಿರೋಧವನ್ನು ಎದುರಿಸಿ ಬದುಕಿತ್ತು, ಬಾಳಿತ್ತು. ಅದರ ಬಾಳ ಪಯಣದಲ್ಲಿ ಕಡು ಬಿಸಿಲನ್ನೂ ಬಿರುಗಾಳಿಯನ್ನೂ ಮಳೆಯ ಮುಸಲಧಾರೆಯನ್ನೂ ಅನಾಯಾಸವಾಗಿ ಎದುರಿಸಿತ್ತು. ಪ್ರಕೃತಿ ನಿಯಮವೇ ಹಾಗೆ! ಶಕ್ತಿಗುಂದಿದಾಗ ತೊಡೆ ನಡುಗುತ್ತದೆ, ತಲೆ ಅದುರುತ್ತದೆ, ಬುಡ ಕುಸಿಯುತ್ತದೆ!

ಮರ ಚಿಗುರುವ ಪ್ರಕ್ರಿಯೆಯೂ ಭಿನ್ನ. ಒಂದೊಂದು ಸಂಕುಲದ ಮರಗಳು ಒಮ್ಮೊಮ್ಮೆ ಚಿಗುರುತ್ತವೆ. ಎಲ್ಲವೂ ಒಮ್ಮೆಗೆ ಧಿಡೀರ್ ಎಂದು ಚಿಗುರು ಮೂಡಿಸುವುದಿಲ್ಲ. ತೋರೆ ಸಾಲುಗಳಲ್ಲಿ, ಊರ ರಸ್ತೆ ಬದಿಗಳಲ್ಲಿ ಇರುವ ಹೊಂಗೆ ಮರಗಳು ತುಸು ಮುಂಚೆಯೇ ಚಿಗುರಿ ನಿಂತುಬಿಡುತ್ತವೆ. ಕರುನಾಡ ಕಾಡುಗಳಲ್ಲಿ ಮುತ್ತುಗದ ಮರಗಳು ಎಲೆಗಿಂತ ಮೊದಲು ಹೂ ಬಿಡುತ್ತವೆ. ಅದೇ ರೀತಿ ಕಕ್ಕೆ ಮರಗಳು ಕೂಡ. ಇಡೀ ಕಾಡೇ ಒಣಗಿ ನಿಂತಂತೆ ತೋರುವ ಸಂದರ್ಭದಲ್ಲಿ ಕಕ್ಕೆ ಹೊಂಗೆ ಮುತ್ತುಗಗಳು ಹಿರಿಯಕ್ಕನಂತೆ ಸೊಬಗಿಸುತ್ತವೆ. ಇತರ ಮರಗಿಡಗಳಿಗೆ ಬದುಕಿನ ಆಸೆಯನ್ನು ಬಿತ್ತುತ್ತವೆ. ಹೌದು, ಹೀಗೆ ಮತ್ತೆ ಮರಗಳು ಚಿಗುರುತ್ತವೆ, ಬದುಕಿನಲ್ಲಿ ಭರವಸೆ ಮೂಡಿಸುತ್ತವೆ.

■ **ಶಿಕಾಕು**

## ಮಾತೇ ಮುತ್ತು

★ ಸಾಗರದಲ್ಲಿ ಮೀನುಗಳು ಇರುವ ಹಾಗೆ ಜನಸಾಗರದಲ್ಲಿ ನಾಯಕರಿರಬೇಕು.

–ಮಾವೊ ತ್ಸೆ ತುಂಗ್

★ ಜನಸಮೂಹದ ಬಗ್ಗೆ ಮಡಿವಂತಿಕೆ ಇಟ್ಟುಕೊಂಡ ಬರಹಗಾರ ಸೃಷ್ಟಿಸಿದ ಸಾಹಿತ್ಯ ಎಷ್ಟೇ ಕುಸುರಿಗಾರಿಕೆಯಿಂದ ಸಂಭ್ರಮಿಸಿದರೂ ಅದು ವ್ಯರ್ಥ.

–ಅನುಭವಾಮೃತ

★ ಬೃಹತ್ ಕಾರ್ಖಾನೆ ಸ್ಥಾಪನೆಗೆ ಭೂಮಿ ಸ್ವಾಧೀನಪಡಿಸಿಕೊಂಡು ಭೂಬ್ಯಾಂಕ್ ಸ್ಥಾಪಿಸುವುದು ಭೂತಾಯಿ ಮೇಲೆ ಹಗಲಿನಲ್ಲಿ ನಡೆಸುವ ಅತ್ಯಾಚಾರ. ಭೂಮಾತೆ ಮೇಲೆ ಅತ್ಯಾಚಾರ ಮಾಡಿದವರಿಗೆ ಮರಣ ದಂಡನೆಯೇ ಸರಿಯಾದ ಶಿಕ್ಷೆ.

–ಕೋ.ಚೆನ್ನಬಸಪ್ಪ

★ ದೇಶದ ಬಗ್ಗೆ ಉಪಾಸನಾ ಭಾವವಿಲ್ಲದ ವ್ಯಕ್ತಿಯಿಂದ ರಾಷ್ಟ್ರಕ್ಕೆ ಯಾವುದೇ ಉಪಯೋಗವಿಲ್ಲ.

–ಎಮರ್ಸನ್

★ ಬೇರೊಬ್ಬರ ಕೇಡಿನಿಂದ ನೋವು ಅನುಭವಿಸುವಾಗ, ಅದಕ್ಕೆ ಪ್ರತಿಕ್ರಿಯಿಸುವಾಗ ತುಂಬ ಎಚ್ಚರ ವಹಿಸಿ.

–ಶಿವರಾಮ ಕಾರಂತ

★ ವಿಷಯವೊಂದರ ಮೇಲೆ ನೀವು ಇಡುವ ಗಾಢವಾದ ನಂಬಿಕೆ, ಅದರಷ್ಟೇ ಎತ್ತರದ ಸಾಧನೆ ನಿಮ್ಮ ಪಾಲಿಗೆ ದೊರಕುತ್ತದೆ.

–ಶೋಲೋವಿನೋ

★ ಜೀವನದ ಅಸಂಖ್ಯ ಚಿಂತನೆಗಳಿಂದ ಮಾನಸಿಕ ಸಮತೋಲವನ್ನು ಕಾಯ್ದುಕೊಳ್ಳಲು ಭಗವಂತನು ನಮಗೆ ಆಸೆ ಮತ್ತು ನಿದ್ದೆಯನ್ನು ದಯಪಾಲಿಸಿದ್ದಾನೆ.

–ರವೀಂದ್ರನಾಥ ಠಾಕೂರ್

★ ಯಾರಿಗೆ ಪ್ರಜ್ಞೆ ಇದೆ, ಅವನು ಎಂದೂ ಅಹಂಕಾರಿಯಾಗುವುದಿಲ್ಲ.

–ದ.ರಾ.ಬೇಂದ್ರೆ

★ ಪ್ರಪಂಚದಲ್ಲಿ ಅತ್ಯಂತ ಸುಂದರ ವಸ್ತುಗಳು ಅತ್ಯಂತ ನಿಕೃಷ್ಟ ಎನಿಸುತ್ತವೆ. ನವಿಲು ಮತ್ತು ಕಮಲ ಇದಕ್ಕೆ ಉದಾಹರಣೆ.

–ವರ್ಡ್ಸ್‌ವರ್ತ್

★ ವ್ಯಂಗ್ಯ ಮಾತುಗಳಿಂದ ಆಗುವ ನೋವು ಕತ್ತಿಯ ಏಟಿನಿಂದಲೂ ಆಗಲಾರದು.

–ಸಿಡ್ನಿ

★ ಮನುಷ್ಯನಿಗೆ ರೂಪ ಒಂದು ಆಭರಣ. ರೂಪಕ್ಕೆ ಗುಣ ಆಭರಣ, ಗುಣಕ್ಕೆ ಜ್ಞಾನ ಆಭರಣ, ಜ್ಞಾನಕ್ಕೆ ಕ್ಷಮೆ ಆಭರಣ.

–ಕಿರಾತಾರ್ಜುನೀಯ

★ ಮನುಷ್ಯನ ನಿಜವಾದ ಗುಣ ಅವನಿಗೆ ಕಷ್ಟಬಂದಾಗ ಗೋಚರಿಸುತ್ತದೆ.

–ಎಪಿಕ್ಯೂರಸ್

★ ಕಷ್ಟಗಳ ಮಧ್ಯೆ ಅವಕಾಶಗಳು ಅಡಗಿರುತ್ತವೆ.

–ಐನ್‌ಸ್ಟೀನ್